ದಾಸನಾದೆ. ಅವಳು ಒಂದು ದಿನ ನನ್ನ ಮಗಳನ್ನು ಎತ್ತಿಕೊಂಡು ತವರುಮನೆಗೆ ಹೊರಟು ಹೋದಳು. ಐದು ವರ್ಷದ ನಮ್ಮ ದಾಂಪತ್ಯ ಜೀವನ ಕೊನೆಯಾಯಿತು. ಸುಖವಿಲ್ಲದ ಸಂಸಾರಕ್ಕಿಂತ ಒಂಟಿಯಾಗಿರುವುದೇ ಲೇಸು ಎಂದುಕೊಂಡು ನಾನು ಅವಳನ್ನು ಮತ್ತೆ ಕರೆಯಲು ಹೋಗಲಿಲ್ಲ. ಅವಳೂ ಹಿಂತಿರುಗಿ ಬರಲಿಲ್ಲ. ಆದರೆ ನಾನು ನನ್ನ ಮಗಳಿಗಾಗಿ ದಿನವೂ ಪರಿತಪಿಸುತ್ತಿದ್ದೆ..." ಎಂದ ಪ್ರೊಫೆಸರರ ಕಣ್ಣುಗಳು ತುಂಬಿಬಂದಿದ್ದು ಬಾರಿನ ಮಂಕುಬೆಳಕಲ್ಲಿ ನನಗೆ ಕಾಣಿಸಿದರೂ ದಾಂಪತ್ಯದ ಬಗ್ಗೆ ಏನೂ ಪರಿಜ್ಞಾನವಿಲ್ಲದ ನಾನು ಏನು ಹೇಳುವುದೆಂದು ತಿಳಿಯದೇ ಮೌನವಹಿಸಿದೆ.

"ಆಮೇಲೆ ನಾನು ಒಂಟಿತನದ ದಿನಗಳನ್ನು ನಿಭಾಯಿಸಲಾರದೆ ಸುಸ್ತಾದೆ. ಮನುಷ್ಯನಿಗೆ ಒಬ್ಬ ಸಂಗಾತಿಯ ಅನಿವಾರ್ಯತೆ ಎಷ್ಟಿದೆ ಎಂಬುದು ನನಗೆ ಅರಿವಾಯಿತು. ಆದರೆ ನನಗೆ ನನ್ನ ಜೊತೆಗೆ ಕೆಲಸ ಮಾಡುವ ಮಹಿಳೆಯರನ್ನು ಮಾತನಾಡಿಸುವ, ಅವರ ಸ್ನೇಹ ಸಂಪಾದಿಸುವ ಮನಸ್ಸು ಮತ್ತು ಕುಶಲತೆ ಇರಲಿಲ್ಲ. ಇದಕ್ಕೇನಾದರೂ ಪರಿಹಾರ ಕಂಡಹಿಡಿಯಬೇಕೆಂಬ ಉದ್ದೇಶದಿಂದ ನನ್ನ ಕೆಲಸಕ್ಕೆ ರಾಜೀನಾಮೆ ಕೊಟ್ಟು, ಮದ್ರಾಸಿನಲ್ಲಿದ್ದ ನನ್ನ ಪಿತ್ರಾರ್ಜಿತ ಆಸ್ತಿಯೆಲ್ಲವನ್ನೂ ಮಾರಾಟ ಮಾಡಿ ಬಂದ ಹಣವನ್ನು ಬ್ಯಾಂಕಿನಲ್ಲಿ ಇಟ್ಟು ಬಡ್ಡಿ ಬರುವಂತೆ ಮಾಡಿ ಬೆಂಗಳೂರಿಗೆ ಬಂದೆ..."

ಇಷ್ಟು ಹೇಳಿದ ಪ್ರೊಫೆಸರ್ ನಿರಾಳರಾದಂತೆ ಕಂಡರು. ಒಂದು ಸಿಗರೇಟು ಹಚ್ಚಿ ಮತ್ತೆ ಮುಂದುವರಿಸಿದರು.

"ವಿಶಾಲ್... ಯಾವುದೇ ಕಾರಣದಿಂದ ಸಂಗಾತಿಯಿಲ್ಲದೇ ಬದುಕಿನಲ್ಲಿ ಒಂಟಿಯಾಗಿರುವವರಿಗೆ ಸಹಾಯವಾಗಲೆಂಬ ದೃಷ್ಟಿಯಿಂದ ಹದಿನೈದು ವರ್ಷಗಳು ಸತತ ಶ್ರಮಪಟ್ಟು, ಹಗಲಿರುಳು ಕಷ್ಟಪಟ್ಟು, ವೈದ್ಯಕೀಯ ಪುಸ್ತಕಗಳನ್ನೋದಿ, ತಂತ್ರಾಂಶಗಳ ಕೋಡಿಂಗ್ ಕಲಿತು ಒಂದು ಮಾನವ ರೂಪದ ರೋಬೋವನ್ನು ವಿನ್ಯಾಸಗೊಳಿಸಿದ್ದೇನೆ..." ಇಷ್ಟನ್ನು ನಿಧಾನವಾಗಿ ಹೇಳುತ್ತಿದ್ದ ಪ್ರೊಫೆಸರರ ಮಾತುಗಳನ್ನು ಕೇಳಿ ನನ್ನ ಕಿವಿಗಳು ಚುರುಕಾದವು. ಇನ್ನಿಲ್ಲದ ಕುತೂಹಲ ಮೂಡಿ ಒಬ್ಬ ಗುರುವಿನೆದುರಿಗೆ ಶಿಷ್ಯ ಕುಳಿತಂತೆ ಕುಳಿತು ಶ್ರದ್ಧೆಯಿಂದ ಕೇಳತೊಡಗಿದೆ.

"ಅದು ಯಥಾವತ್ತು ಮಾನವರಂತೆ ವರ್ತಿಸಬಲ್ಲದು. ಆಹಾರವನ್ನು ತಿನ್ನಲಾರದು ಮತ್ತು ಸಂತಾನೋತ್ಪತ್ತಿಯ ಸಾಮರ್ಥ್ಯವಿಲ್ಲವೆನ್ನವುದನ್ನು ಬಿಟ್ಟರೆ ಉಳಿದಂತೆ ಅದು ಎಲ್ಲಾ ಕೆಲಸಗಳಲ್ಲೂ ಮಾನವರನ್ನು ಮೀರಿಸಬಲ್ಲದು. ಮಾನವರಂತೆಯೇ ಉಸಿರಾಡಬಲ್ಲದು... ಯಾವುದೇ ಭಾಷೆಯನ್ನು ನಿರರ್ಗಳವಾಗಿ ಮಾತನಾಡಬಲ್ಲದು. ಮಾನವರ ದೈಹಿಕ ರಚನೆಯಂತೆಯೇ ಅದರ ಹೊರರೂಪವನ್ನೂ ರಚಿಸಿದ್ದೇನೆ. ಪುರುಷನಂತೆ ಅಥವಾ ಮಹಿಳೆಯಂತೆ ಹೊರರೂಪವನ್ನು ಬದಲಾಯಿಸಬಹುದು. ಅದಕ್ಕೆ ತಕ್ಕನಾಗಿ ದೈಹಿಕ ಅಂಗಗಳನ್ನು ವಿನ್ಯಾಸಗೊಳಿಸಿ ಅವು ಸರಿಯಾಗಿ ಕಾರ್ಯನಿರ್ವಹಿಸುವಂತೆ ಪ್ರೋಗ್ರಾಮ್ ಮಾಡಬಹುದು..." ಎಂದು ಮಾತು ನಿಲ್ಲಿಸಿ ಸಿಗರೇಟು ಹಚ್ಚಿದ ಪ್ರೊಫೆಸರರ ಸಾಧನೆಯನ್ನು ಕೇಳಿ ನನಗೆ ಅತ್ಯಂತ ಸಂತೋಷವಾಯಿತು. ಕೈಮುಗಿಯಬೇಕೆನ್ನಿಸಿತು.

"ಗ್ರೇಟ್ ಸರ್... ರಿಯಲಿ ಗ್ರೇಟ್ ಸರ್. ವೆರಿ ಗ್ರೇಟ್ ಸರ್..." ಎಂದು ನನಗರಿವಿಲ್ಲದಂತೆಯೆ ಬಡಬಡಿಸತೊಡಗಿದೆ.

ಪ್ರೊಫೆಸರರು ಹಸನ್ಮುಖಿರಾದರು. "ಎಂದೂ ಯಾರಿಗೂ ಹೇಳದ ನನ್ನ ಸಂಶೋಧನೆಯನ್ನು ನಿನ್ನ ಬಳಿ ಹೇಳಿದ್ದೇನೆ ವಿಶಾಲ್..." ಎಂದು ಏಕವಚನ ಉಪಯೋಗಿಸಿದ್ದನ್ನು ಕಂಡು ಅವರಿಗೆ ನನ್ನ ಬಗ್ಗೆ ಮೂಡಿದ ನಂಬಿಕೆ ವಿಶ್ವಾಸಗಳಿಗೆ ನನ್ನ ಹೃದಯ ತುಂಬಿಬಂದಿತು. "ಥ್ಯಾಂಕ್ಯೂ ವೆರಿ ಮಚ್ ಸರ್..." ಎಂದು ಹೃತ್ಪೂರ್ವಕ ಧನ್ಯವಾದ ಸಲ್ಲಿಸಿದೆ.

"ವಿಶಾಲ್... ನೀನೊಬ್ಬ ಬ್ಯಾಚೆಲರ್... ಅಪಾರ್ಟ್‌ಮೆಂಟಿನಲ್ಲಿದ್ದೀಯ... ಯಾರಿಗೂ ಅನುಮಾನ